PSK
F8B

# F R I E N D S   O F   A P P I K O

We cordially invite you for a

P R E S S  M E E T

with

Mr. PANDURANGA HEGDE
Leader of Appiko Movement

on

Tuesday, 3rd May 1994

at

Gandhi Bhavan
Kumarapark, Bangalore.

Time

11.30 A.M

Topic

CRITICISM OF JOINT FOREST

PLANNING AND MANAGEMENT

(JFPM)

P. Srinivas
for FRIENDS OF APPIKO

1668, East End A Main, 9th Block, Jayanagar, B - 69

# ಅಪ್ಪಿಕೋ 25

# ಚಳುವಳಿಯ ನೆನಪಿನ ಹಬ್ಬ



# ಆಮಂತ್ರಣ

ದಿನಾಂಕ : 7, 8, ಸಪ್ಟೆಂಬರ್ 2008

ಸ್ಥಳ :

**ಲಕ್ಷ್ಮೀ ನರಸಿಂಹ ಮಾಧ್ಯಮಿಕ ಶಾಲೆ,**

**ಸಾಲ್ಕಣಿ**

**ಪರಿಸರ ಸಂರಕ್ಷಣಾ ಕೇಂದ್ರ**

## ಕಾರ್ಯಕ್ರಮ ಉದ್ಘಾಟನೆ

**7 ಸೆಪ್ಟೆಂಬರ್ 2008, ಭಾನುವಾರ ಬೆಳಿಗ್ಗೆ 10-00 ಘಂಟೆಗೆ**

ಅಧ್ಯಕ್ಷರು : ಶ್ರೀ ಜಿ. ಎನ್. ಹೆಗಡೆ, ಮುರೇಗಾರ (ಸಾಲ್ಕಣಿ ಹೈಸ್ಕೂಲ್ ಅಧ್ಯಕ್ಷರು)

ಅತಿಥಿಗಳು : ಶ್ರೀ ಸುಂದರಲಾಲ ಬಹುಗುಣ, ಚಿಪ್ಕೋ

ಶ್ರೀ ನಾಗರಾಜ ಹಂಪೊಳೆ (ಅರಣ್ಯ ಸಂರಕ್ಷಣಾಧಿಕಾರಿಗಳು, ಕೆನರಾ ಸರ್ಕಲ್)

ಉದ್ಘಾಟಕರು : ಶ್ರೀ ಶಿವು ದೇವು ಗೌಡ, ಕೆಳಾಸೆ-ಕುದ್ರಗೋಡ

ನಿರ್ವಹಣೆ : ಶ್ರೀ ಭಾಸ್ಕರ ಹೆಗಡೆ, ಕಾಗೇರಿ

**ಬೆಳಿಗ್ಗೆ 11-30 ರಿಂದ ಮಧ್ಯಾಹ್ನ 12-30 ಗೋಷ್ಠಿ 1**

**ವಿಷಯ : ಪ್ರಸ್ತಾವನೆ, ಉ.ಕ. ಸಮಗ್ರ ಚಿತ್ರಣ**

ಅಧ್ಯಕ್ಷರು : ಶ್ರೀ ವಿ. ಜಿ. ಹೆಗಡೆ (ಮುಖ್ಯಾಧ್ಯಾಪಕರು ಸಾಲ್ಕಣಿ ಹೈಸ್ಕೂಲ್)

ಸಂಪನ್ಮೂಲ ವ್ಯಕ್ತಿ : ಶ್ರೀ ಪಾಂಡುರಂಗ ಹೆಗಡೆ (ಅಪ್ಪಿಕೋ ಕಾರ್ಯಕರ್ತರು)

ನಿರ್ವಹಣೆ : ಶ್ರೀ ಭಾಸ್ಕರ ಹೆಗಡೆ, ಕಾಗೇರಿ

**ಮಧ್ಯಾಹ್ನ 2-30 ರಿಂದ 3-30 ಗೋಷ್ಠಿ 2**

**ವಿಷಯ : ಉತ್ತರ ಕನ್ನಡ ವನ್ಯಜೀವಿ ಸ್ಥಿತಿಗತಿ ಮತ್ತು ಸಂರಕ್ಷಣೆ**

ಅಧ್ಯಕ್ಷರು : ಶ್ರೀ ರಾಜೇಂದ್ರ ಆರ್. ಹೆಗಡೆ, ನೇಗಾರ (ಕೃಷಿಕರು)

ಸಂಪನ್ಮೂಲ ವ್ಯಕ್ತಿ : ಶ್ರೀ ಮನೋಜಕುಮಾರ

(ಅರಣ್ಯ ಸಂರಕ್ಷಣಾಧಿಕಾರಿಗಳು ದಾಂಡೇಲಿ ಅಭಯಾರಣ್ಯ)

ನಿರ್ವಹಣೆ : ಶ್ರೀ ಭಾಸ್ಕರ ಹೆಗಡೆ, ಕಾಗೇರಿ

**ಮಧ್ಯಾಹ್ನ 4-00 ರಿಂದ 5-00 ಗೋಷ್ಠಿ 3**

**ವಿಷಯ : ಮರ ಹೇಳುವ ಕಥೆ**

ಅಧ್ಯಕ್ಷರು : ಶ್ರೀ ಗಣಪತಿ ಗೋಪಾಲ ಹೆಗಡೆ, ವಾರಣಾಸಿ ಮನೆ (ಕೃಷಿಕರು)

ಸಂಪನ್ಮೂಲ ವ್ಯಕ್ತಿ : ಶ್ರೀ ಶಿವಾನಂದ, ಕಳವೆ

(ಖ್ಯಾತ ಲೇಖಕರು ಪರಿಸರ ಕಾರ್ಯಕರ್ತರು)

ನಿರ್ವಹಣೆ : ಶ್ರೀ ಭಾಸ್ಕರ ಹೆಗಡೆ ಕಾಗೇರಿ

ಮಧ್ಯಾಹ್ನ 12-30 ರಿಂದ 1-00 ಗಂಟೆ ವರೆಗೆ
ಅಪ್ಪಿಕೋ ಚಲನಚಿತ್ರ ಪ್ರದರ್ಶನ

ಸಂಜೆ 5-30 ರಿಂದ 6-00

ಕಿರು ಅರಣ್ಯ ಉತ್ಪತ್ತಿ, ಕಿರು ಚಲನಚಿತ್ರ ಪ್ರದರ್ಶನ.

**ತಾಳಮದ್ದಳೆ ಕಾರ್ಯಕ್ರಮ**

ಅಧ್ಯಕ್ಷರು : ಶ್ರೀ ನರಸಿಂಹ ಸತ್ಯ ಭಟ್ಟ ತಟ್ಟೀಸರ

ಸಂಜೆ **'ನಿಸರ್ಗ ಸಂಧಾನ ತಾಳಮದ್ದಳೆ'**

ಯಕ್ಷಸಂಭ್ರಮ ಕಲಾವಿದರಿಂದ

**8 ಸೆಪ್ಟೆಂಬರ್ 2008 ಬೆಳಿಗ್ಗೆ 8 ಗಂಟೆ**

**ಅಪ್ಪಿಕೋ ಪ್ರಾರಂಭಿಸಿದ ಬಿಳೆಕಲ್ ಅಡವಿ ಭೇಟಿ.**

**ಅಶ್ವತ್ ಗಿಡ ನೆಡುವುದು. ಅಪ್ಪಿಕೋ ಫಲಕ ಅನಾವರಣ**

**ಬೆಳಿಗ್ಗೆ 11-30 ರಿಂದ**

**ಸಮಾರೋಪ ಸಮಾರಂಭ**

ಅಧ್ಯಕ್ಷತೆ : ಡಾ॥ ಆರ್. ವಿ. ಹೆಗಡೆ, ಸಾಲ್ಕಣಿ

ಅತಿಥಿಗಳು : ಶ್ರೀ ಸುಂದರಲಾಲ್ ಬಹುಗುಣ

ಶ್ರೀ ಧೂಮಸಿಂಗ್ ನೇಗಿ

ಪ್ರೊ॥ ಬಂಡೋಪಾಧ್ಯಾಯ (ಪರಿಸರ ಕಾರ್ಯಕರ್ತರು)

ನಿರ್ವಹಣೆ : ಶ್ರೀ ಭಾಸ್ಕರ ಹೆಗಡೆ, ಕಾಗೇರಿ

## ಸರ್ವರನ್ನೂ ಸ್ವಾಗತಿಸುವ

| **ಪದಾಧಿಕಾರಿಗಳು** | **ಕಾರ್ಯಕರ್ತರು** |
|---|---|
| ಲಕ್ಷ್ಮೀ ನರಸಿಂಹ ಮಾಧ್ಯಮಿಕ ಶಾಲೆ | ಪರಿಸರ ಸಂರಕ್ಷಣಾ ಕೇಂದ್ರ |
| ಸಾಲ್ಕಣಿ | ಶಿರಸಿ |

## ವಿಷಯ ಸೂಚಿ :

ಅಪ್ಪಿಕೋ : ಪತ್ರಿಕಾ ಪ್ರಕಟಣೆ. ಐತಿಹಾಸಿಕ ದಾಖಲೆ ಪ್ರದರ್ಶನ

ಫೋಟೋಗಳ ಪ್ರದರ್ಶನ

ಪರಿಸರ ಪುಸ್ತಕಗಳ ಪ್ರದರ್ಶನ ಏರ್ಪಡಿಸಲಾಗಿದೆ.

**ಅಪ್ಪಿಕೋ ಚಳುವಳಿಯಲ್ಲಿ ಭಾಗವಹಿಸಿದ / ಪ್ರೋತ್ಸಾಹಿಸಿದ**

**ದಿವಂಗತರಾದವರ ಸ್ಮರಣೆ**

ಗಿಡನೆಡುವಿಕೆ ಕಾರ್ಯಕ್ರಮಗಳು ಇರುತ್ತವೆ.

ತೆರೆದ-ಅಂಚೆ

ಶ್ರೀಮತಿ/ಶ್ರೀ ______________________

______________________

______________________

______________________

ಶ್ರೀ ಲಕ್ಷ್ಮೀನಾರಾಯಣ ಆಫ್‌ಸೆಟ್, ಶಿರಸಿ ✆ : 226455

# ಶ್ರೀ ಲಕ್ಷ್ಮೀ ನರಸಿಂಹ ಮಾಧ್ಯಮಿಕ ಶಾಲಾ ಸಾಲ್ಕಣಿ

ಪೋಸ್ಟ : ಸಾಲ್ಕಣಿ, ತಾಲೂಕ : ಶಿರಸಿ ( ಉ.ಕ.)

ಉ.ನಂ, :
ದಿನಾಂಕ :________________

ಮುಖ್ಯಾಧ್ಯಾಪಕರು/ಪ್ರಾಂಶುಪಾಲರು

____________________

____________________

____________________

ವಿಷಯ: ಅಪ್ಪಿಕೋ ಚಳುವಳಿ ಬೆಳ್ಳಿಹಬ್ಬ ಕಾರ್ಯಕ್ರಮದ ಅಂಗವಾಗಿ **ಎರಡು ದಿನದ ಪರಿಸರ ಶಿಕ್ಷಣ ಶಿಬಿರದಲ್ಲಿ** ಭಾಗವಹಿಸಲು ತಮ್ಮ ಶಿಕ್ಷಣ ಸಂಸ್ಥೆಯಿಂದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಕಳುಹಿಸುವ ಕುರಿತು.

ಮಾನ್ಯರೇ,

1983 ಸೆಪ್ಟೆಂಬರ 8 ರಂದು ಸಾಲ್ಕಣಿ ಸುತ್ತ ಮುತ್ತ ಅಪ್ಪಿಕೋ ಚಳುವಳಿ ಪ್ರಾರಂಭವಾಗಿದ್ದು ಒಂದು ಐತಿಹಾಸಿಕ ಘಟನೆ. ಬರುವ ಸೆಪ್ಟೆಂಬರ್ 8, 2008ಕ್ಕೆ, ಅಪ್ಪಿಕೋ ಚಳುವಳಿಗೆ ಸರಿಯಾಗಿ 25 ವರ್ಷವಾಗುತ್ತದೆ. ಆಗ ಸಕ್ರಿಯವಾಗಿ ಭಾಗವಹಿಸಿದ ಕಾರ್ಯಕರ್ತರು ಸೇರಿ ಬೆಳ್ಳಿ ಹಬ್ಬವನ್ನು, ಚಳುವಳಿ ಪ್ರಾರಂಭಿಸಿದ ಸ್ಥಳ ಸಾಲ್ಕಣಿಯಲ್ಲಿ, ರಚನಾತ್ಮಕವಾಗಿ ಆಚರಿಸಲು ನಿರ್ಧರಿಸಿದ್ದಾರೆ.

**ವಿದ್ಯಾರ್ಥಿಗಳಲ್ಲಿ ಪರಿಸರ ಜಾಗೃತಿ, ಮೂಡಿಸಲು ದಿ. ಸೆಪ್ಟೆಂಬರ 7 ಹಾಗೂ 8, 2008ರಂದು 'ಪರಿಸರ ಶಿಕ್ಷಣ ಶಿಬಿರ'ವನ್ನು ಏರ್ಪಡಿಸಲಾಗಿದೆ.**

ಅದರ ಪ್ರಯುಕ್ತ ಸೆಪ್ಟೆಂಬರ್ 7, 2008ರಂದು 3 ಗೋಷ್ಠಿಗಳ ಕಾರ್ಯಕ್ರಮ ಏರ್ಪಡಿಸಲಾಗಿದೆ. ಪರಿಸರ, ಪರಿಸರ ಸಂಭಂಧಿ ವಿಷಯಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ನಾಗೇಶ ಹೆಗಡೆ ಪತ್ರಕರ್ತರು, ಶ್ರೀ ಮನೋಜ ಕುಮಾರ, ದಾಂಡೇಲಿ ವನ್ಯಜೀವಿ ಅರಣ್ಯಾಧಿಕಾರಿ, ಶ್ರೀ ಶಿವಾನಂದ ಕಳವೆ ಪ್ರಸಿದ್ಧ ಲೇಖಕರು, ಮಕ್ಕಳೊಡನೆ ಅನುಭವ ಹಂಚಿಕೊಳ್ಳಲಿದ್ದಾರೆ.

ಸಂಜೆ ನಿಸರ್ಗಸಂಧಾನ ಯಕ್ಷಗಾನ ತಾಳಮದ್ದಲೆ, ಬಿಡುವಿನ ವೇಳೆಯಲ್ಲಿ 'ಅಪ್ಪಿಕೋ' ಮತ್ತು ಕಿರುಅರಣ್ಯ ಉತ್ಪತ್ತಿ ಕುರಿತು ಕಿರು ಚಲನಚಿತ್ರ ಪ್ರದರ್ಶನವಿರುತ್ತದೆ. ದಿನಾಂಕ 8 ರಂದು ಬೆಳಿಗ್ಗೆ ಅರಣ್ಯ ಪ್ರದೇಶಕ್ಕೆ ಭೇಟಿ, ಅಪ್ಪಿಕೋ ಪ್ರಾರಂಭವಾದ ಸ್ಥಳದಲ್ಲಿ ಅಶ್ವತ್ಥ ಗಿಡ ನೆಡುವಿಕೆ ಇತ್ಯಾದಿ ಕಾರ್ಯಕ್ರಮ. ನಂತರ ಸಮಾರೋಪ ಸಮಾರಂಭ. ಚಿಪ್ಕೋ ಖ್ಯಾತಿಯ ಶ್ರೀ ಸುಂದರಲಾಲ ಬಹುಗುಣ ಅವರು ಎರಡೂ ದಿನ ಮಕ್ಕಳೊಡನೆ ಉಪಸ್ಥಿತರಿರುವರು.

(ಪು.ತಿ.ನೋ)

ಶಿಬಿರದಲ್ಲಿ ಅರವತ್ತು ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಅವಕಾಶ ಕಲ್ಪಿಸಿರುತ್ತಿದ್ದು ಸಾಲ್ಕಣಿ ಸುತ್ತ ಮುತ್ತಲಿನ ಊರ ನಾಗರಿಕರು ಊಟ, ತಿಂಡಿ, ವಸತಿ, ವ್ಯವಸ್ಥೆ ಮಾಡಲಿದ್ದಾರೆ.


ಸಾಲ್ಕಣಿ ಊರ ನಾಗರಿಕರು, ಸಾಲ್ಕಣಿ ಹೈಸ್ಕೂಲ್, ಮತ್ತು ಅಪ್ಪಿಕೋ ಕಾರ್ಯಕರ್ತರ ಸಹಯೋಗದೊಂದಿಗೆ ಶಿಬಿರ/ಕಾರ್ಯಕ್ರಮದ ಸಂಘಟನೆ ಮಾಡಲಿದ್ದಾರೆ. ಜಿಲ್ಲೆಯಲ್ಲಿ ಹುಟ್ಟು ಹಾಕಿದ ಪ್ರಥಮ ಪರಿಸರ ಚಳುವಳಿ, ಅದರ ಸಂಸ್ಮರಣೆ ಈ ಕಾರ್ಯಕ್ರಮದ ಮೂಲ ಉದ್ದೇಶ. ಇದನ್ನು ಅರ್ಥಪೂರ್ಣವಾಗಿ ಆಚರಿಸಲು ಪರಿಸರ ಸಂರಕ್ಷಣೆಯ ಮಹತ್ವವನ್ನು ತಿಳಿಯಲು ಮುಂದಿನ ಪೀಳಿಗೆಯ ನಾಗರಿಕರಾದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಬೇಕೆಂಬುದು ಸಂಘಟಕರ ಆಶಯ.

| | | |
|---|---|---|
| | ಮುಖ್ಯಾಧ್ಯಾಪಕರು | ಅಧ್ಯಕ್ಷರು |
| | ಲಕ್ಷ್ಮಿನರಸಿಂಹ ಮಾದ್ಯಮಿಕ ಶಾಲೆ | ಲಕ್ಷ್ಮಿನರಸಿಂಹ ಮಾದ್ಯಮಿಕ ಶಾಲೆ |
| ಊರ ನಾಗರಿಕರು | ಸಾಲ್ಕಣಿ | ಸಾಲ್ಕಣಿ |

ವಿ.ಸೂ. :

- ಭಾಗವಹಿಸುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಪೂರ್ಣ ಮಾಹಿತಿ ಲಗತ್ತಿಸಿದ ನಮೂನೆಯಲ್ಲಿ ತುಂಬಿ ಮೇಲಿನ ವಿಳಾಸಕ್ಕೆ ದಿನಾಂಕ 28/8/08ರ ಒಳಗಾಗಿ ಕಳುಹಿಸಿ ಭಾಗವಹಿಸುವಿಕೆ ಖಾತ್ರಿ ಪಡಿಸಬೇಕಾಗಿ ವಿನಂತಿ.
- ಶಿರಸಿಯಿಂದ ಸಾಲ್ಕಣಿಗೆ ಬೆಳಿಗ್ಗೆ 8.30ಕ್ಕೆ, ಮತ್ತು 9.15 ಕ್ಕೆ ಬಸ್ ಇರುತ್ತದೆ. 7ನೇ ತಾರೀಖು 9.30ರ ಒಳಗೆ ಕಾರ್ಯಕ್ರಮದ ಸ್ಥಳದಲ್ಲಿ ಹಾಜರ ಇರಬೇಕು. ಶಿಬಿರಾರ್ಥಿಗಳ ಪ್ರಯಾಣ, ಊಟ, ವಸತಿ ವೆಚ್ಚ ಸಂಘಟಕರೇ ವಹಿಸಿಕೊಳ್ಳುತ್ತಾರೆ.

**ಸಾಲ್ಕಣಿಗೆ ತಲುಪಲು**



**ಲಕ್ಷ್ಮಿನರಸಿಂಹ ಮಾಧ್ಯಮಿಕ ಶಾಲೆ ಸಾಲ್ಕಣಿ ಇವರಿಗೆ**

**ಪೋ: ಸಾಲ್ಕಣಿ, ತಾ: ಶಿರಸಿ, ಫೋನ್ : 08283– 260166.**

ವಿಷಯ : ಪರಿಸರ ಶಿಕ್ಷಣ ಶಿಬಿರದಲ್ಲಿ ಭಾಗವಹಿಸುವವರ ಮಾಹಿತಿ.

| ಅ.ನಂ. | ಭಾಗವಹಿಸುವ ವಿದ್ಯಾರ್ಥಿ/ವಿದ್ಯಾರ್ಥಿನಿಯ ಹೆಸರು, ವಿಳಾಸ, ಫೋನ್ ನಂ: | ಶಾಲೆ ಹೆಸರು ವಿಳಾಸ | ಕಲಿಯುತ್ತಿರುವ ತರಗತಿ | ವಯಸ್ಸು. |
|---|---|---|---|---|
| | | | | |
| | | | | |

ದಿನಾಂಕ : ಶಾಲೆ ಮುಖ್ಯಾಧ್ಯಾಪಕರ
ಸ್ಥಳ : ಸೀಲ್ ಹೆಸರು, ಸಹಿ.

# ಪರಿಸರ ಸಂರಕ್ಷಣಾ ಕೇಂದ್ರ

ಬಸವರಾಜ ನಿಲಯ ಚೌಕಿಮಠ ಶಿರಸಿ, (ಉತ್ತರ ಕನ್ನಡ)೫೮೧೪೦೧

**Ph : 08384 225139M: 9448818099**

**Email : appiko@gmail.com & appiko@sancharnet.in**


---

## ಆಮಂತ್ರಣ

ಮಾನ್ಯರೇ,

ಅಂದು

ಸೆಪ್ಟಂಬರ್ ೮, ೧೯೮೩. ಕಳಾಸೆ ಕುದ್ರಗೋಡಿನಲ್ಲಿ ನಾವೆಲ್ಲ ಸೇರಿ ಪ್ರಾರಂಭಿಸಿದ ಹೋರಾಟ 'ಅಪ್ಪಿಕೋ' ರಾಜ್ಯ ಮತ್ತು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿದೆ.

ಇಂದು

ಅಪ್ಪಿಕೋ ಆರಂಭವಾಗಿ ೨೫ ವರ್ಷಗಳಾಗಿವೆ ಈ ಎರಡೂವರೆ ದಶಕಗಳಲ್ಲಿ ನಾವು ಸಾಧಿಸಿದ್ದೇನು? ನಮ್ಮ ಕನಸು ನನಸಾಗಿದೆಯೆ?

ನಾವು ರೂಪಿಸಿದ ಉದ್ದೇಶ ಉಳಿಸು, ಬೆಳೆಸು ಮತ್ತು ಮಿತವಾಗಿ ಬಳಸುವದನ್ನು ಸಾಧಿಸಲು ಸಾದ್ಯವಾಗಿದೆಯೆ?

ಈಗಲೂ ಪರಿಸರ ರಕ್ಷಣೆಗಾಗಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಿರಂತರ ಹೋರಾಟ ನಡೆಸಿರುವ ನಾವೆಲ್ಲಾ ಸೇರಲು ಇದೊಂದು ರಜತ ಅವಕಾಶ. ಇಪ್ಪತ್ತೈದು ವರ್ಷ ಆದ ಸಂದರ್ಭದಲ್ಲಿ ನಾವೆಲ್ಲ ಸೇರಿ ನೆನಪಿಸಿಕೊಂಡು, ಮುನ್ನಡೆಯಲು ಅಪ್ಪಿಕೋ ಪ್ರಾರಂಭಿಸಿದ ದಿನವಾದ ಸಪ್ಟೆಂಬರ ೮ ರಂದು ಯಾವ ರೀತಿಯ ಕಾರ್ಯಕ್ರಮ ಹಾಕಿಕೊಳ್ಳಬಹುದು ಎಂದು ಚಿಂತಿಸಲು ನಾವೆಲ್ಲಾ ಸೇರೋಣ.

**ಸ್ಥಳ : ತೋಟಗಾರ್ಸ್ ಹಾಸ್ಟೆಲ್ ಅರವಿಂದ ಹಾಲ್**
**ದಿನಾಂಕ : ಜುಲೈ ೨೨, ೨೦೦೮ ಮಂಗಳವಾರ**
**ಸಮಯ : ೩ ಗಂಟೆ ಗೆ**

ದಯವಿಟ್ಟು ಬನ್ನಿ

ತಮ್ಮೆಲ್ಲರನ್ನು ಆಹ್ವಾನಿಸುವ

ಪಾಂಡುರಂಗ ಹೆಗಡೆ

ಪರಿಸರ ಸಂರಕ್ಷಣಾ ಕೇಂದ್ರದ
ಪರವಾಗಿ ೪/೭/೦೮

ಉತ್ತರ ಕನ್ನಡ ಜಿಲ್ಲಾ ಪಂಚಾಯತ ಸಾ.ಶಿ. ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಶಿರಸಿ

## – ಜ್ಞಾಪನ –

ದಿನಾಂಕ : 13-08-2008

ವಿಷಯ : ಶ್ರೀ ಲಕ್ಷ್ಮೀನರಸಿಂಹ ಮಾಧ್ಯಮಿಕ ಶಾಲೆ, ಸಾಲ್ಕಣಿ, ಶಿರಸಿಯಲ್ಲಿ ನಡೆಯುವ ಪರಿಸರ ಶಿಕ್ಷಣ ಶಿಬಿರದಲ್ಲಿ ವಿದ್ಯಾರ್ಥಿಗಳು ಭಾಗವಹಿಸುವ ಕುರಿತು.

***

ಈ ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ ದಿನಾಂಕ : 7-9-2008 ಹಾಗೂ 8-9-2008 ರಂದು (ಎರಡು ದಿನ) ಶ್ರೀ ಲಕ್ಷ್ಮೀನರಸಿಂಹ ಮಾಧ್ಯಮಿಕ ಶಾಲೆ, ಸಾಲ್ಕಣಿ, ತಾ : ಶಿರಸಿ ಇಲ್ಲಿ ಚಿಪ್ಕೋ ಚಳುವಳಿ ಖ್ಯಾತಿಯ ಶ್ರೀ ಸುಂದರಲಾಲ ಬಹುಗುಣ ಹಾಗೂ ಪರಿಸರ ತಜ್ಞರಿಂದ ಪರಿಸರಕ್ಕೆ ಸಂಬಂಧಪಟ್ಟ ಮಹತ್ವದ ವಿಚಾರ ಮಂಡನೆ ಹಾಗೂ ಚರ್ಚೆ ನಡೆಯಲಿದೆ. ಇದು ವಿದ್ಯಾರ್ಥಿಗಳಿಗೆ ಮಹತ್ವದ ಜ್ಞಾನ ಒದಗಿಸುವ ಕಾರ್ಯಕ್ರಮವಾಗಿರುತ್ತದೆ. ಆದ್ದರಿಂದ ಈ ಕಾರ್ಯಕ್ರಮದಲ್ಲಿ ಪ್ರತಿ ಶಾಲೆಯಿಂದ ಒಬ್ಬ ಹುಡುಗ ಹಾಗೂ ಒಬ್ಬ ಹುಡುಗಿ ಹೀಗೆ ಎರಡು ವಿದ್ಯಾರ್ಥಿಗಳಿಗೆ ಅವಕಾಶವಿದೆ. ಅವರಿಗೆ ಊಟ ಹಾಗೂ ವಸತಿ ವ್ಯವಸ್ಥೆ ಮಾಡಿರುತ್ತಾರೆ. ನಿಮ್ಮ ಶಾಲೆಯಿಂದ ಎರಡು ವಿದ್ಯಾರ್ಥಿಗಳನ್ನು ಈ ಕಾರ್ಯಕ್ರಮಕ್ಕೆ ಬಿಡುಗಡೆಗೊಳಿಸಬೇಕಾಗಿ ತಿಳಿಸಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಶಿರಸಿ (ಉ. ಕ.)

ಗೆ :

# ಪತ್ರಿಕಾ ಪ್ರಕಟಣೆ

ಇದೇ ಬರುವ 7, 8 ಸಪ್ಟೆಂಬರ್ 2008 ರಂದು ಅಪ್ಪಿಕೋ ಚಳಿವಳಿಯಾಗಿ 25 ವರ್ಷವಾದ ಸಂಧರ್ಭದಲ್ಲಿ ಸಾಲ್ಕಣಿ ಸುತ್ತ ಮುತ್ತ ಚಳುವಳಿಯಲ್ಲಿ ಭಾಗವಹಿಸಿದ ಕಾರ್ಯಕರ್ತರೆಲ್ಲಾ ಸೇರಿ ನೆನಪಿನ ಹಬ್ಬ ಆಚರಿಸುವುದೆಂದು ನಿರ್ಧರಿಸಿದ್ದೇವೆ. ನಮ್ಮೆಲ್ಲರ ಹೆಮ್ಮೆಯ ವಿದ್ಯಾಸಂಸ್ಥೆಯಾದ ಲಕ್ಷ್ಮಿನರಸಿಂಹ ಮಾಧ್ಯಮಿಕ ಶಾಲೆಯಲ್ಲಿ ಎರಡು ದಿನದ ಸರಳ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಮೊದಲನೇ ದಿನ ಶಿರಸಿ ತಾಲೂಕಿನ ಎಲ್ಲಾ ಮಾಧ್ಯಮಿಕ ಶಾಲೆಗಳಿಂದ 2 ಮಕ್ಕಳಂತೆ ಒಟ್ಟೂ 60 ಮಕ್ಕಳಿಗೆ 'ಪರಿಸರ ಜಾಗೃತಿ' ಶಿಬಿರವನ್ನು ಏರ್ಪಡಿಸಿದ್ದೇವೆ. ಎರಡನೇ ದಿನ ವೃಕ್ಷಾರೋಪಣ, ಅಪ್ಪಿಕೋ ನಾಮಫಲಕ ಅನಾವರಣ ಮತ್ತು ಸಮಾರೋಪ ನಡೆಯಲಿದೆ. ನಮ್ಮೆಲ್ಲರಿಗೂ ಚಳುವಳಿ ಸಂಧರ್ಭದಲ್ಲಿ ಸ್ಫೂರ್ತಿಯ ಸೆಲೆಯಾದ ಸುಂದರಲಾಲ ಬಹುಗುಣ ಅವರು ಎರಡೂ ದಿನ ಉಪಸ್ಥಿತರಿರುತ್ತಾರೆ.

ಲಕ್ಷ್ಮಿನರಸಿಂಹ ಮಾಧ್ಯಮಿಕ ಶಾಲೆ, ಪರಿಸರ ಸಂರಕ್ಷಣಾ ಕೇಂದ್ರ ಮತ್ತು ಸಾಲ್ಕಣಿ ಊರ ಸುತ್ತ ಮುತ್ತಲೂ ಚಳುವಳಿಯಲ್ಲಿ ಭಾಗವಹಿಸಿದ ಎಲ್ಲಾ ಕಾರ್ಯಕರ್ತರೂ ಸೇರಿ ನಡೆಸುವ ಈ ಕಾರ್ಯಕ್ರಮಕ್ಕೆ ಉತ್ತರ ಕನ್ನಡ ಜಿಲ್ಲೆ, ಕರ್ನಾಟಕ ರಾಜ್ಯದಲ್ಲಿ ಅಪ್ಪಿಕೋ ಚಳುವಳಿಯಲ್ಲಿ ಭಾಗವಹಿಸಿದ ಈ ಚಳುವಳಿ ಹಬ್ಬಲು ಕಾರಣರಾದ ಎಲ್ಲಾ ವ್ಯಕ್ತಿ, ಸಂಸ್ಥೆಗಳನ್ನು ಈ ಸಂಧರ್ಭದಲ್ಲಿ ಸಂಪರ್ಕಿಸಲು ಸಾಧ್ಯವಾಗದೇ ಇರುವುದರಿಂದ ಈ ಪ್ರಕಟಣೆಯನ್ನೇ, ಆಮಂತ್ರಣವೆಂದು ತಿಳಿದು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರಗು ತರಬೇಕೆಂದು ಕೇಳಿಕೊಳ್ಳುತ್ತೇವೆ.

VHeşl

ವಿ.ವಿ. ಹೆಗಡೆ ಗುಬ್ಬಿಗದ್ದೆ

NSB

ಎನ್. ಎಸ್.ಭಟ್ಟ, ಮಣದೂರ.

ದಿನಾಂಕ : 01/09/08

ಶಿರಸಿಯಿಂದ ಈ ಕಾರ್ಯಕ್ರಮಕ್ಕೆ ಬರುವ ಪತ್ರಕರ್ತರಿಗೆ ಪರಿಸರ ಸಂರಕ್ಷಣಾ ಕೇಂದ್ರದ ವತಿಯಿಂದ 7-9-08 ಕ್ಕೆ ಬೆಳಿಗ್ಗೆ 9 ಗಂಟೆಗೆ ಸಾಮ್ರಾಟ ಹೋಟೆಲ್‌ನಿಂದ ವಾಹನ ವ್ಯವಸ್ಥೆ ಮಾಡಿದ್ದೇವೆ.

ಮಾರನೇ ದಿನ 08-09-08ಕ್ಕೂ ಸಹ ಬೆಳಿಗ್ಗೆ 10.30 ಗಂಟೆಗೆ ಸಾಮ್ರಾಟ ಹೋಟೆಲ್‌ನಿಂದ ವಾಹನ ವ್ಯವಸ್ಥೆ ಮಾಡಿದ್ದೇವೆ.

# ಅಪ್ಪಿಕೋ 25, ಚಳುವಳಿಯ ನೆನಪಿನ ಹಬ್ಬ

## ಶ್ರೀ ಲಕ್ಷ್ಮೀನರಸಿಂಹ ಮಾಧ್ಯಮಿಕ ಶಾಲೆ ಸಾಲ್ಕಣಿ

### ಪರಿಸರ ಸಂರಕ್ಷಣಾ ಕೇಂದ್ರ

# ಪ್ರಶಸ್ತಿ ಪತ್ರ

ಕುಮಾರ/ಕುಮಾರಿ ______________________________ ಇವರು

ಮೇಲಿನ ಸಂಸ್ಥೆಗಳು ಸಾಲ್ಕಣಿ ಮಾಧ್ಯಮಿಕ ಶಾಲೆಯಲ್ಲಿ ದಿನಾಂಕ **7, 8, ಸಪ್ಟೆಂಬರ್ 2008** ರಂದು ಏರ್ಪಡಿಸಿದ **"ಪರಿಸರ ಜಾಗೃತಿ ಶಿಬಿರ"**ದಲ್ಲಿ ಭಾಗವಹಿಸಿ ತರಬೇತಿ ಪಡೆದಿರುತ್ತಾರೆಂದು ದೃಢೀಕರಿಸುತ್ತೇವೆ.

| | | |
|---|---|---|
| **ಜಿ. ಎನ್. ಹೆಗಡೆ, ಮುರೇಗಾರ** | **ಪಾಂಡುರಂಗ ಹೆಗಡೆ** | **ಸುಂದರಲಾಲ್ ಬಹುಗುಣ** |
| **ಅಧ್ಯಕ್ಷರು** | **ಅಪ್ಪಿಕೋ ಆಂದೋಲನ** | **ಚಿಪ್ಕೋ ಆಂದೋಲನ** |

ಶ್ರೀ ಲಕ್ಷ್ಮೀನಾರಾಯಣ ಆಫ್‌ಸೆಟ್, ಶಿರಸಿ ✆ : 226455

ಜಿ. ಎನ್ ಹೆಗಡೆ ಮುರೆಗಾರ
ಅಧ್ಯಕ್ಷರು
ಲಕ್ಷ್ಮೀನರಸಿಂಹ ಮಾಧ್ಯಮಿಕ ಶಾಲೆ ಸಾಲ್ಕಣಿ.

ಮಾನ್ಯರೇ,

ದಿನಾಂಕ 7, 8 ಸಪ್ಟೆಂಬರ್ 2008 ರಂದು ತಮ್ಮ ಸಂಸ್ಥೆಯ ಸಂಪೂರ್ಣ ಸಹಯೋಗದೊಂದಿಗೆ 'ಪರಿಸರ ಜಾಗೃತಿ ಶಿಬಿರ' ಮತ್ತು ಸಹ್ಯಾದ್ರಿ ದಿನಾಚರಣೆ ಆಚರಿಸಿದ್ದೇವೆ. ಕಾರ್ಯಕ್ರಮದ ವ್ಯವಸ್ಥೆ ಮತ್ತು ಕಾರ್ಯಕ್ರಮ ಸಮಯಕ್ಕೆ ಸರಿಯಾಗಿ ನಡೆಯಲು ತಮ್ಮೂರಿನ ಕಾರ್ಯಕರ್ತರು, ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ಸಹಕಾರವನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇವೆ.

ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಿದಂತೆ ಅಪ್ಪಿಕೋ ಚಳುವಳಿಯಲ್ಲಿ ಭಾಗವಹಿಸಿದ ಎಲ್ಲಾ ಕಾರ್ಯಕರ್ತರೂ ಕಾರ್ಯಕ್ರಮ ಸಫಲವಾಗಿ ನಡೆಯಲು ಸಹಕರಿಸಿದ್ದಾರೆ. ತಮ್ಮ ಇಳಿವಯಸ್ಸಿನಲ್ಲೂ ಕಾರ್ಯಕ್ರಮದಲ್ಲಿ ಭಾಗವಹಿಸಿದ ಚಿಪ್ಕೋ ನೇತಾರ ಶ್ರೀ ಸುಂದರಲಾಲ ಬಹುಗುಣ ಅವರು ಭಾಗವಹಿಸಿದ ಈ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತೆಂದು ಈ ಸಂದರ್ಭದಲ್ಲಿ ನೆನಪಿಸಿಕೊಂಡು ಈ ಕಾರ್ಯಕ್ರಮಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಪರಿಸರ ಸಂರಕ್ಷಣಾ ಕೇಂದ್ರದ ವತಿಯಿಂದ ಹಾರ್ದಿಕ ಅಭಿನಂದನೆ ಹಾಗೂ ಧನ್ಯವಾದಗಳನ್ನು ಈ ಮೂಲಕ ಸಲ್ಲಿಸುತ್ತೇವೆ.

ಕೃತಜ್ಞತೆಗಳೊಂದಿಗೆ

ತಮ್ಮ ವಿಶ್ವಾಸಿ

ದಿನಾಂಕ:
ಸ್ಥಳ:

# ಶ್ರೀ ಲಕ್ಷ್ಮೀ ನರಸಿಂಹ ಮಾಧ್ಯಮಿಕ ಶಾಲಾ ಸಾಲ್ಕಣಿ

ಪೋಸ್ಟ : ಸಾಲ್ಕಣಿ, ತಾಲೂಕ : ಶಿರಸಿ ( ಉ.ಕ.)

ಉ.ನಂ, :
ದಿನಾಂಕ :

---

ಮುಖ್ಯಾಧ್ಯಾಪಕರು/ಪ್ರಾಂಶುಪಾಲರು

ವಿಷಯ: ಅಪ್ಪಿಕೋ ಚಳುವಳಿ ಬೆಳ್ಳಿಹಬ್ಬ ಕಾರ್ಯಕ್ರಮದ ಅಂಗವಾಗಿ ಎರಡು ದಿನದ ಪರಿಸರ ಶಿಕ್ಷಣ ಶಿಬಿರದಲ್ಲಿ ಭಾಗವಹಿಸಲು ತಮ್ಮ ಶಿಕ್ಷಣ ಸಂಸ್ಥೆಯಿಂದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಕಳುಹಿಸುವ ಕುರಿತು.

ಮಾನ್ಯರೇ,

1983 ಸೆಪ್ಟೆಂಬರ 8 ರಂದು ಸಾಲ್ಕಣಿ ಸುತ್ತ ಮುತ್ತ ಅಪ್ಪಿಕೋ ಚಳುವಳಿ ಪ್ರಾರಂಭವಾಗಿದ್ದು ಒಂದು ಐತಿಹಾಸಿಕ ಘಟನೆ. ಬರುವ ಸೆಪ್ಟೆಂಬರ್ 8, 2008ಕ್ಕೆ, ಅಪ್ಪಿಕೋ ಚಳುವಳಿಗೆ ಸರಿಯಾಗಿ 25 ವರ್ಷವಾಗುತ್ತದೆ. ಆಗ ಸಕ್ರಿಯವಾಗಿ ಭಾಗವಹಿಸಿದ ಕಾರ್ಯಕರ್ತರು ಸೇರಿ ಬೆಳ್ಳಿ ಹಬ್ಬವನ್ನು, ಚಳುವಳಿ ಪ್ರಾರಂಭಿಸಿದ ಸ್ಥಳ ಸಾಲ್ಕಣಿಯಲ್ಲಿ, ರಚನಾತ್ಮಕವಾಗಿ ಆಚರಿಸಲು ನಿರ್ಧರಿಸಿದ್ದಾರೆ.

**ವಿದ್ಯಾರ್ಥಿಗಳಲ್ಲಿ ಪರಿಸರ ಜಾಗೃತಿ, ಮೂಡಿಸಲು ದಿ. ಸೆಪ್ಟೆಂಬರ 7 ಹಾಗೂ 8, 2008ರಂದು 'ಪರಿಸರ ಶಿಕ್ಷಣ ಶಿಬಿರ'ವನ್ನು ಏರ್ಪಡಿಸಲಾಗಿದೆ.**

ಅದರ ಪ್ರಯುಕ್ತ ಸೆಪ್ಟೆಂಬರ್ 7, 2008ರಂದು 3 ಗೋಷ್ಠಿಗಳ ಕಾರ್ಯಕ್ರಮ ಏರ್ಪಡಿಸಲಾಗಿದೆ. ಪರಿಸರ, ಪರಿಸರ ಸಂಭಂಧಿ ವಿಷಯಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಪಾಂಡುರಂಗ ಹೆಗಡೆ ಪರಿಸರ ಕಾರ್ಯಕರ್ತರು, ಶ್ರೀ ಮನೋಜ ಕುಮಾರ, ದಾಂಡೇಲಿ ವನ್ಯಜೀವಿ ಅರಣ್ಯಾಧಿಕಾರಿ, ಶ್ರೀ ಶಿವಾನಂದ ಕಳವೆ ಪ್ರಸಿದ್ಧ ಲೇಖಕರು, ಮಕ್ಕಳೊಡನೆ ಅನುಭವ ಹಂಚಿಕೊಳ್ಳಲಿದ್ದಾರೆ.

ಸಂಜೆ ನಿಸರ್ಗಸಂಧಾನ ಯಕ್ಷಗಾನ ತಾಳಮದ್ದಲೆ, ಬಿಡುವಿನ ವೇಳೆಯಲ್ಲಿ 'ಅಪ್ಪಿಕೋ' ಮತ್ತು ಕಿರುಅರಣ್ಯ ಉತ್ಪತ್ತಿ ಕುರಿತು ಕಿರು ಚಲನಚಿತ್ರ ಪ್ರದರ್ಶನವಿರುತ್ತದೆ. ದಿನಾಂಕ 8 ರಂದು ಬೆಳಿಗ್ಗೆ ಅರಣ್ಯ ಪ್ರದೇಶಕ್ಕೆ ಭೇಟಿ, ಅಪ್ಪಿಕೋ ಪ್ರಾರಂಭವಾದ ಸ್ಥಳದಲ್ಲಿ ಅಶ್ವತ್ಥ ಗಿಡ ನೆಡುವಿಕೆ ಇತ್ಯಾದಿ ಕಾರ್ಯಕ್ರಮ. ನಂತರ ಸಮಾರೋಪ ಸಮಾರಂಭ. ಚಿಪ್ಕೋ ಖ್ಯಾತಿಯ ಶ್ರೀ ಸುಂದರಲಾಲ ಬಹುಗುಣ ಅವರು ಎರಡೂ ದಿನ ಮಕ್ಕಳೊಡನೆ ಉಪಸ್ಥಿತರಿರುವರು.

(ಮ.ಶಿ.ನೋ)

ಶಿಬಿರದಲ್ಲಿ ಅರವತ್ತು ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಅವಕಾಶ ಕಲ್ಪಿಸಿರುತ್ತಿದ್ದು ಸಾಲ್ಕಣಿ ಸುತ್ತ ಮುತ್ತಲಿನ ಊರ ನಾಗರಿಕರು ಊಟ, ತಿಂಡಿ, ವಸತಿ, ವ್ಯವಸ್ಥೆ ಮಾಡಲಿದ್ದಾರೆ.

ಸಾಲ್ಕಣಿ ಊರ ನಾಗರಿಕರು, ಸಾಲ್ಕಣಿ ಹೈಸ್ಕೂಲ್, ಮತ್ತು ಅಪ್ಪಿಕೋ ಕಾರ್ಯಕರ್ತರ ಸಹಯೋಗದೊಂದಿಗೆ ಶಿಬಿರ/ಕಾರ್ಯಕ್ರಮದ ಸಂಘಟನೆ ಮಾಡಲಿದ್ದಾರೆ. ಜಿಲ್ಲೆಯಲ್ಲಿ ಹುಟ್ಟು ಹಾಕಿದ ಪ್ರಥಮ ಪರಿಸರ ಚಳುವಳಿ, ಅದರ ಸಂಸ್ಮರಣೆ ಈ ಕಾರ್ಯಕ್ರಮದ ಮೂಲ ಉದ್ದೇಶ. ಇದನ್ನು ಅರ್ಥಪೂರ್ಣವಾಗಿ ಆಚರಿಸಲು ಪರಿಸರ ಸಂರಕ್ಷಣೆಯ ಮಹತ್ವವನ್ನು ತಿಳಿಯಲು ಮುಂದಿನ ಪೀಳಿಗೆಯ ನಾಗರಿಕರಾದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಬೇಕೆಂಬುದು ಸಂಘಟಕರ ಆಶಯ.

ಊರ ನಾಗರಿಕರು


ಮುಖ್ಯಾಧ್ಯಾಪಕರು
[illegible] ಶಾಲೆ
ಲಕ್ಷ್ಮಿ ಸಾಲ್ಕಣಿ [illegible]

ಅಧ್ಯಕ್ಷರು
ಲಕ್ಷ್ಮಿನರಸಿಂಹ [illegible] ಶಾಲೆ
ಸಾಲ್ಕಣಿ
ಅಧ್ಯಕ್ಷರು
[illegible] ನರಸಿಂಹ ಶಿಕ್ಷಣ ಸಮಿತಿ
[illegible] : ಸಾಲ್ಕಣಿ : ಶಿರಸಿ (ಉ.ಕ.)

ವಿ.ಸೂ. :

- ಭಾಗವಹಿಸುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಪೂರ್ಣ ಮಾಹಿತಿ ಲಗತ್ತಿಸಿದ ನಮೂನೆಯಲ್ಲಿ ತುಂಬಿ ಮೇಲಿನ ವಿಳಾಸಕ್ಕೆ ದಿನಾಂಕ 28/8/08ರ ಒಳಗಾಗಿ ಕಳುಹಿಸಿ ಭಾಗವಹಿಸುವಿಕೆ ಖಾತ್ರಿ ಪಡಿಸಬೇಕಾಗಿ ವಿನಂತಿ.
- ಶಿರಸಿಯಿಂದ ಸಾಲ್ಕಣಿಗೆ ಬೆಳಿಗ್ಗೆ 8.30ಕ್ಕೆ, ಮತ್ತು 9.15 ಕ್ಕೆ ಬಸ್ ಇರುತ್ತದೆ. 7ನೇ ತಾರೀಖು 9.30ರ ಒಳಗೆ ಕಾರ್ಯಕ್ರಮದ ಸ್ಥಳದಲ್ಲಿ ಹಾಜರ ಇರಬೇಕು. ಶಿಬಿರಾರ್ಥಿಗಳ ಪ್ರಯಾಣ, ಊಟ, ವಸತಿ ವೆಚ್ಚ ಸಂಘಟಕರೇ ವಹಿಸಿಕೊಳ್ಳುತ್ತಾರೆ.

**ಸಾಲ್ಕಣಿಗೆ ತಲುಪಲು**



ಲಕ್ಷ್ಮಿನರಸಿಂಹ ಮಾಧ್ಯಮಿಕ ಶಾಲೆ ಸಾಲ್ಕಣಿ ಇವರಿಗೆ

ಪೋ: ಸಾಲ್ಕಣಿ, ತಾ: ಶಿರಸಿ, ಪೋನ್ : 08283- 260166.

ವಿಷಯ : ಪರಿಸರ ಶಿಕ್ಷಣ ಶಿಬಿರದಲ್ಲಿ ಭಾಗವಹಿಸುವವರ ಮಾಹಿತಿ.

| ಅ.ನಂ. | ಭಾಗವಹಿಸುವ ವಿದ್ಯಾರ್ಥಿ/ವಿದ್ಯಾರ್ಥಿನಿಯ ಹೆಸರು, ವಿಳಾಸ, ಪೋನ್ ನಂ: | ಶಾಲೆ ಹೆಸರು ವಿಳಾಸ | ಕಲಿಯುತ್ತಿರುವ ತರಗತಿ | ವಯಸ್ಸು. |
|---|---|---|---|---|
| | | | | |
| | | | | |


ದಿನಾಂಕ :
ಸ್ಥಳ :

ಶಾಲೆ
ಸೀಲ್

ಮುಖ್ಯಾಧ್ಯಾಪಕರು
ಹೆಸರು, ಸಹಿ.

# 'ಅಪ್ಪಿಕೋ' ಚಳವಳಿಗೆ 25 ವರ್ಷ
# ಪ್ರತೀ ವರ್ಷ ಸೆ. 8 : ಇನ್ನು 'ಸಹ್ಯಾದ್ರಿ ದಿವಸ'

ಉತ್ತರ ಕನ್ನಡ ಜಿಲ್ಲೆಯಲ್ಲಿ ಅಪ್ಪಿಕೋ ಚಳುವಳಿ ಆರಂಭಗೊಂಡ ದಿನ (ಸೆಪ್ಟೆಂಬರ್ 8, 1983)ವನ್ನು ಇನ್ನು ಮುಂದೆ ಪ್ರತೀ ವರ್ಷ



'ಸಹ್ಯಾದ್ರಿ ದಿವಸ'ವೆಂದು ಆಚರಿಸಲಾಗುತ್ತದೆ. ಶಿರಸಿಯ ಪರಿಸರ ಸಂರಕ್ಷಣಾ ಕೇಂದ್ರ ನಿರ್ಧರಿಸಿದ ಈ ವಿಷಯವನ್ನು ಚಿಪ್ಕೋ ಚಳವಳಿಯ ನೇತಾರ ಶ್ರೀ ಸುಂದರಲಾಲ ಬಹುಗುಣ ಇತ್ತೀಚೆಗೆ ಅಪ್ಪಿಕೋ ಚಳುವಳಿ -25 ರ ಸಂಸ್ಮರಣೆ ಅಂಗವಾಗಿ ಶಿರಸಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಾರ್ವಜನಿಕವಾಗಿ ಘೋಷಿಸಿದ್ದಾರೆ. ವಿಶೇಷವಾಗಿ ಶಿಕ್ಷಕರು, ವಿದ್ಯಾರ್ಥಿಗಳು, ಸಹ್ಯಾದ್ರಿ ಯಾತ್ರೆ ಕೈಗೊಂಡು ಪರಿಸರ ಜಾಗೃತ ಅಭಿಯಾನ ಮುಂದುವರಿಸಬೇಕು. ಇದರ ಪ್ರಭಾವ ಉತ್ತರ ಭಾರತದಲ್ಲೂ ಹರಡಬೇಕು ಎಂದು ಸುಂದರಲಾಲ ಬಹುಗುಣ ಹೇಳಿದ್ದಾರೆ.

## ಬಹುಗುಣ ಪ್ರತಿಪಾದಿಸಿದ 'ಬಹುಗುಣ'

ಎಲ್ಲವೂ ಬೇಕು, ಎಲ್ಲವೂ ತಮ್ಮದಾಗಬೇಕೆಂಬ ದುರಾಸೆಯಿಂದ ನಮ್ಮ ತಲೆಮಾರಿನವರು ಮಾಡಿದ ತಪ್ಪನ್ನು ನಕಲು ಮಾಡದೇ ಮನುಕುಲಕ್ಕೆ ಜೀವನ ಒದಗಿಸಿದ ಜಲಸೆಲೆಯ ಗೋಪುರವಾದ (Water towers of mankind) ಸಹ್ಯಾದ್ರಿ ಪರ್ವತ ತಪ್ಪಲಿನ ರಕ್ಷಣೆಗೆ ಪಣ ತೊಡಿರಿ. ದೇಶಕ್ಕೇ ಪ್ರೇರಣೆ ನೀಡುವ ಇಲ್ಲಿನ ಪರಿಸರ ಪ್ರೇಮದ ಪರಂಪರೆಯನ್ನು ಚೈತನ್ಯಶೀಲವಾಗಿಡಿರಿ.

ಅಪ್ಪಿಕೋ ಚಳುವಳಿ - 25 ರ ಸಂಸ್ಮರಣೆ ಅಂಗವಾಗಿ ಶಿರಸಿ ತಾಲೂಕಿನ ಸಾಲ್ಕಣಿ ಪ್ರೌಢಶಾಲೆಯಲ್ಲಿ ನಡೆದ 'ನೆನಪಿನ ಹಬ್ಬ'ದಲ್ಲಿ ಪಾಲ್ಗೊಂಡು ಅವರು ಪ್ರತಿಪಾದಿಸಿದ 'ಬಹುಗುಣ'ಗಳ ಸಾಲು ಇಂತಿದೆ.

ಪರಿಸರ ರಕ್ಷಣೆ ವಿಷಯ ಯಾವುದೇ ಪರೋಪಕಾರದ ಕಾರ್ಯವಲ್ಲ. ಬದಲಾಗಿ ನಮ್ಮನ್ನು ನಾವು ಕಾಪಾಡಿಕೊಳ್ಳಲು ನಿಭಾಯಿಸಲೇಬೇಕಾದ ಅನಿವಾರ್ಯ ಜವಾಬ್ದಾರಿ. ಸಂಪದ್ಭರಿತವಾಗಿದ್ದ ಇಲ್ಲಿನ ಪರಿಸರದ ಅನೇಕ ಪ್ರಜಾತಿಗಳು ನಷ್ಟವಾಗಿವೆ. ಇಲ್ಲಿ ಬಾಳಿದ ನಮ್ಮ (ಪೂರ್ವಜ) ಆದಿಮಾನವರಿಗಿಂತ ನಾವು ತೀರಾ ಬಡವರಾಗಿದ್ದೇವೆ. ಅರಣ್ಯ-ಪರಿಸರದ ಬಗ್ಗೆ ಕಾಳಜಿ ವಹಿಸದಿದ್ದರೆ ಜಲವೇ ಇಲ್ಲದೇ ಎಲ್ಲವೂ ನಾಶವಾಗುವುದರ ಜೊತೆಗೆ ಮನುಕುಲವೇ ಇಲ್ಲವಾಗುತ್ತದೆ.

ದೇಶದಲ್ಲಿ ಇನ್ನು ಮುಂದೆ ಸೌರಶಕ್ತಿಯೊಂದೇ ಪರ್ಯಾಯ ಇಂಧನವಾಗಲಿದ್ದು ಪ್ರಥಮ ಆದ್ಯತೆಯ ಮೇರೆಗೆ ಸೌರಶಕ್ತಿ ಬಳಸುವ ಕಾರ್ಯಕ್ರಮ ಹಾಕಿಕೊಳ್ಳಬೇಕು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ದುರಾದೃಷ್ಟಕ್ಕೆ ಕೆಲವೇ ದಿನ ಮಾತ್ರ ಸೂರ್ಯನ ಬೆಳಕು ಸಿಗುತ್ತದೆ. ಆದರೆ ಭಾರತದಲ್ಲಿ ಕನಿಷ್ಠ 300 ದಿನಗಳಷ್ಟು ಕಾಲ ಸೌರಶಕ್ತಿ



ಪಡೆಯಲು ಅವಕಾಶವಿದೆ. ಸರಕಾರಗಳು ಅಪರಿಮಿತ ಶಕ್ತಿ ಬಳಸಿಕೊಳ್ಳಲು ಮುಂದಾಗಬೇಕು.

ಹರಿನೀರು ಯೋಜನೆ ಮೂಲಕ ಶಕ್ತಿಯ ಉತ್ಪಾದನೆ ಕೈಗೊಳ್ಳಬಹುದು. ಇದಕ್ಕಾಗಿ ನಿರಂತರ ನದಿಗಳಲ್ಲಿ ನೀರು ಹರಿಯಬೇಕಾಗುತ್ತದೆ. ಹೀಗಾಗಿ ನದಿಗಳ ಜಲಾನಯನ ಪ್ರದೇಶದಲ್ಲಿ ಹೆಚ್ಚು ಹೆಚ್ಚು ಮರಗಿಡಗಳನ್ನು ಬೆಳೆಸಬೇಕು. ನದಿಗಳಿಗೆ ಆಣೆಕಟ್ಟು ಕಟ್ಟಿ ವಿದ್ಯುತ್ ಉತ್ಪಾದನೆಗಿಂತ ಮರಗಿಡಗಳನ್ನು ಬೆಳೆಸುವ ಮೂಲಕ ನೈಸರ್ಗಿಕ ನೀರಾವರಿ ಆಣೆಕಟ್ಟು ರಚಿಸಬೇಕಾಗಿದೆ.

ಗೋಬರ್ ಅನಿಲ ಗ್ರಾಮೀಣ ಭಾಗದ ಇಂಧನ ಸಮಸ್ಯೆ ದೂರೀಕರಿಸಲು ಪರ್ಯಾಯವಾಗಲಿದ್ದು ಪ್ರಸ್ತುತವೂ ಆಗಿದೆ. ರಾಸಾಯನಿಕ ಗೊಬ್ಬರ ಅನಾಹುತಗಳಿಂದ ದೂರವಾಗಲು ದನಕರುಗಳನ್ನು ಸಾಕಿ ಸಾವಯವ ಗೊಬ್ಬರಕ್ಕೆ ಒತ್ತು ನೀಡಬೇಕು.

ಪ್ರೀತಿ ಮಾಡುವಲ್ಲಿ ಜಿಪುಣತನ ತೋರಿಸಬೇಡಿ. ತಂದೆ ತಾಯಿ ಜೊತೆಗಾರರಷ್ಟೇ ಅಲ್ಲ, ಮರಗಿಡ, ಪಶುಪಕ್ಷಿ ಹೀಗೆ ಸಕಲ ಜೀವರಾಶಿಯೂ ಪ್ರೀತಿಗೆ ಅರ್ಹ ಎಂಬುದನ್ನು ಮರೆಯದಿರಿ.